## Construction of Irrigation Tract Road in Bhadra Project Area

892. **Sri N. G. HALAPPA** (Channagiri).—

Will the Chief Minister be pleased to state :—

(*a*) whether they have received any proposal for construction of Irrigation tract roads in Bhadra Project area ;

(*b*) if so, the action taken by the Government ?

**Sri VEERENDRA PATIL** (Chief Minister).—

(*a*) Yes.

(*b*) The proposal is under consideration of Government.

## Notices of Question of Privilege

### (i) *re* : Comments upon the members of Mysore Legislature by the Chief Minister, Andhra Pradesh.

†ಶ್ರೀ ಹೆಚ್. ಎನ್. ನಂಜೇಗೌಡ (ಅರಕಲಗೂಡು).—ಸ್ವಾಮಿ, ನಾನು ತಮ್ಮ ಕಡೆಗೆ ಒಂದು ಪ್ರಿವಿಲೇಜು ಮೋಷನ್ ಕಳುಹಿಸಿಕೊಟ್ಟಿದ್ದೆ. ಅದು ಶನಿವಾರ ನಡೆದಿರತಕ್ಕದ್ದು. ಶನಿವಾರದ ದಿನ ಆಂಧ್ರದ ಮುಖ್ಯ ಮಂತ್ರಿಗಳಾದ ಶ್ರೀ ಬ್ರಹ್ಮಾನಂದ ರೆಡ್ಡಿಯವರು ಅಲ್ಲಿ ನಡೆಯುತ್ತಿರುವ ವಿಧಾನ ಸಭೆಯಲ್ಲಿ ನಾವು ಈ ಸಭೆಯಲ್ಲಿ ನಡೆಸತಕ್ಕ ಕಾರ್ಯಕರಾಪಗಳ ಬಗ್ಗೆ ಮತ್ತು ಇಲ್ಲಿನ ಸದಸ್ಯರ ಬಗ್ಗೆ ಅನುಚಿತವಾದ ಹಾಗೂ ಅನಗತ್ಯವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ; ಮತ್ತು ನಮ್ಮ ಸದಸ್ಯರ ಹಕ್ಕಿಗೂ ಚ್ಯುತಿ ತಂದಿದ್ದಾರೆ. ಪತ್ರಿಕೆಗಳಲ್ಲಿ ವರದಿಯಾಗಿರುವ ಪ್ರಕಾರ ನ್ಯಾಯಬಾಹಿರವಾದ ಆಪಾದನೆಗಳನ್ನು ಮೈಸೂರು ವಿಧಾನ ಸಭಾ ಸದಸ್ಯರ ಮೇಲೆ ಮಾಡಿದ್ದಾರೆ. ನಾವು ಸಭೆಯಲ್ಲಿ ಇಲ್ಲಿ ಬಂದು ಪ್ರಮಾಣ ವಚನ ಸ್ವೀಕರಿಸುವಾಗ ಸತ್ಯ ಸಂಗತಿಗಳನ್ನೇ ಇಲ್ಲಿ ಹೇಳುತ್ತೇವೆ ಎಂದು ಪ್ರಮಾಣ ವಚನವನ್ನು ಕೈಗೊಂಡಿದ್ದೇವೆ. ಅದರಂತೆ ಸತ್ಯ ಸಂಗತಿಗಳನ್ನೇ ಇಲ್ಲಿ ಹೇಳುತ್ತೇವೆ. ಮಾನ್ಯ ಸದಸ್ಯರು ಅಲ್ಲಿ ನ್ಯಾಯಬಾಹಿರವಾದ ಮಾತುಗಳನ್ನು ಹೇಳಿದ್ದಾರೆ ಎಂದು ಹೇಳುವುದು ಇಲ್ಲಿನ ಮಾನ್ಯ ಸಭೆಗೆ ಹಾಗೂ ಇಲ್ಲಿನ ಸದಸ್ಯರುಗಳ ಹಕ್ಕಿಗೆ ಚ್ಯುತಿ ತಂದಿದ್ದಾರೆ. ಅವರಿಗೆ ಶ್ರೀ ಕೆ. ಎಲ್. ರಾವ್‌ರವರು ಮುಖಂಡರಾಗಿರಬಹುದು ಮಾನ್ಯ ಬ್ರಹ್ಮಾನಂದ ರೆಡ್ಡಿಯವರು ಬೇಕಾದಷ್ಟು ಅವರನ್ನು ಹೊಗಳಲಿ. ಅದರ ಬಗ್ಗೆ ಹೇಳುತ್ತಿಲ್ಲ. ಅವರನ್ನು ಸ್ವರ್ಗ ಲೋಕದಿಂದ ಬಂದವರು ಎಂದು ಬೇಕಾದರೂ ಹೇಳಿಕೊಳ್ಳಲಿ ಅದು ಅಭಿಪ್ರಾಯ ಭೇದಗಳಾದವು. ಆದರೆ ಅವರು ಬೇರೆ ರಾಜ್ಯದ ಮುಖ್ಯ ಮಂತ್ರಿಗಳಾಗಿರಬಹುದು. ಶ್ರೀ ಬ್ರಹ್ಮಾನಂದ ರೆಡ್ಡಿಯವರು ಇಲ್ಲ ನಾವು ಕೆ. ಎಲ್. ರಾವ್‌ರ ಬಗ್ಗೆ ನಾವು ಮಾಡಿರತಕ್ಕ ಟೀಕೆಗಳು ನ್ಯಾಯಬಾಹಿರವಾದವು ಎಂದು ಹೇಳಲು ಶ್ರೀ ಬ್ರಹ್ಮಾನಂದ ರೆಡ್ಡಿಯವರಿಗೆ ಹಕ್ಕಿಲ್ಲ. ಇದು ನಮ್ಮ ಹಕ್ಕಿಗೆ ಚ್ಯುತಿ ತಂದಿರುವ ಪ್ರಶ್ನೆ. ರಾಜ್ಯಾಂಗಬದ್ಧವಾಗಿ ಇಲ್ಲಿ ಒಂದು ಮಾತು ಹೇಳಬೇಕು. ಶ್ರೀ ಕೆ. ಎಲ್. ರಾವ್‌ರವರು ಆಂಧ್ರ ಸರಕಾರಕ್ಕೆ ಅಲ್ಲ ಕೇಂದ್ರ ಸರಕಾರದಲ್ಲಿ ಮಂತ್ರಿಗಳಾಗಿರುವುದು. ಅವರು ಇಡೀ ದೇಶಕ್ಕೆ ಒಬ್ಬರು ಮಂತ್ರಿಗಳಾಗಿ ಕೇಂದ್ರ ಸರಕಾರದಲ್ಲಿ ಇರುವಾಗ ಅವರೇ ಹತ್ತಾರು ವರ್ಷಗಳಿಂದ ಸರಕಾರದ ವತಿಯಿಂದ ಸತ್ಯ ಸಂಗತಿಗಳನ್ನು ಹೇಳಬೇಕು ಎನ್ನುವುದರಲ್ಲಿ ಬೇರೆ ವಿಧವಾದ ಟೀಕೆಗಳು ಮಾಡಿದ್ದಾರೆ ಎನ್ನುವುದೆಲ್ಲಾ ಪತ್ರಿಕೆಗಳಲ್ಲಿ ವರದಿಯಾಗಿದೆ ಮತ್ತು ಈ ಸಭೆಯಲ್ಲಿ ಪ್ರಸ್ತಾಪ ಮಾಡಿರತಕ್ಕದ್ದೂ ವರದಿಯಾಗಿದೆ. ಆ ವರದಿಗಳು ನಿಜವಾಗಿದ್ದರೆ ಅದರಿಂದ ನಮ್ಮ ಹಕ್ಕಿಗೆ ಚ್ಯುತಿ ಬಂದಂತಾಗುತ್ತದೆ. ಆದುದರಿಂದ ತಾವು ಇದರ ಸಂಬಂಧವಾದ ಕಾರ್ಯಕರಾಪಗಳು ಅಲ್ಲಿ ಏನು ನಡೆದಿವೆ ಅದನ್ನು ಆ ಸರಕಾರದ ಮೂಲಕ ವರದಿ ತರಿಸಿಕೊಂಡು ತೀರ್ಮಾನ ಕೊಡುತ್ತೀರಾ ಅಥವಾ ಬೇರೆ ಏಜನ್ಸಿ ಮೂಲಕ ವರದಿ ತರಿಸಿ ತಮ್ಮ ತೀರ್ಮಾನ ಕೊಡುತ್ತೀರಾ ?

(ಶ್ರೀ ಹೆಚ್. ಎನ್. ನಂಜೇಗೌಡ)

ಇದರಲ್ಲಿ ಮೂಲಭೂತವಾದ ಕನ್‌ಸ್ಟಿಟ್ಯೂಷನರ್ ಪಾಯಿಂಟ್ ಇದೆ. ಇದಕ್ಕಾಗಿ ತಾವು ಇಲ್ಲಿ ಅಪ್ಪಣೆ ಕೊಡಬೇಕು ಎಂದು ಕೇಳುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಸ್ವಾಮಿ ಇದು ಕಾನ್‌ಸ್ಟಿಟ್ಯೂಷನರ್ ಪಾಯಿಂಟು. ಮಾನ್ಯ ಸದಸ್ಯರಾದ ಶ್ರೀಮಾನ್ ನಂಜೇಗೌಡರು ಹೇಳಿದುದನ್ನು ನಾನೂ ಕೂಡ ಸಂಪೂರ್ಣವಾಗಿ ಒಪ್ಪುತ್ತೇನೆ. ಇದರ ಮೇಲೆ ನಾನು ಕೂಡ ಒಂದು ಪ್ರಿವಿಲೇಜು ಮೋಷನ್ ತಮ್ಮ ಕಡೆಗೆ ಕಳುಹಿಸಿದ್ದೇನೆ. ಇದರ ಬಗ್ಗೆ ತಮ್ಮ ತೀರ್ಮಾನ ನೋಡಿಕೊಂಡು ನಂತರ ನನ್ನ ವಿಚಾರಗಳನ್ನು ಇಡುತ್ತೇನೆ.

ಅಧ್ಯಕ್ಷರು.—ಅದಕ್ಕೆ ರೂಲಿಂಗು ಕೊಡುತ್ತೇನೆ.

**Mr. SPEAKER.**—Article 194 of the Constitution deals with the powers, privileges and immunities of the House of Legislature of State and of the members and the Committes of a House of such Legislature. According to Clause (1) of that article there is, subject to the provisions of the Constitution and the rules, freedom of speech in the Legislature. Clause 2 provides that no member of the Legislature of a State shall be liable to any proceedings in any Court in respect of anything said or any vote given by him in the Legislature or any Committee thereof. It is clear from the above provision that a member has freedom of speech in the Legislature or its Committees and no action can be taken in any Court for anything said or done within the House. Mention is made of Court and not Legislature. Though there is no express mention of the Legislature it may be taken that the immunity extends against action by other Legislatures also; for otherwise there would be no meaning in having a freedom which can be set at naught by another Legislature. A member can claim privilege for anything said or done by him within the House, although his speech or action may amount to a contempt of another Legislature. It should not be assumed that a member is free to cast reflections etc. There are rules of procedure in every Legislature framed under Article 208 of the Constitution. Rule 288 of the Rules of Procedure of the Mysore Legislative Assembly provides that a member while speaking should not use offensive expressions about the conduct or proceedings of Parliament or any State Legislature.

A member of a Legislature can claim privilege in regard to any thing said or done by him within the House of which he is a member and no action can be taken against him for contempt of any other Legislature.

In 1953 when the Andhra State Bill was being discussed in the Madras Assembly, a member moved an amendment for inclusion of Kolar in the proposed Andhra State. The amendment was carried. Next day the Chief Minister of Mysore referred to the said amendment in the Mysore Legislative Assembly and stated that it was a snap vote and was not binding on Mysore. A question of privilege was raised in Madras Assembly contending that the Chief Minister of Mysore had cast reflections on the proceedings of Madras Assembly. The Speaker

of Madras Assembly ruled that no question of breach of privilege was involved as members of each legislature had freedom of speech in the House.

Similarly our members have been commenting on a number of individuals who are members of other legislatures and parliament during discussion of the activities of Shivsena and river waters dispute. No action would lie on our members in respect of their utterences in this House. I would however appeal to members not to make derogatory remarks against members of other legislatures, etc.

Since what is stated by the Chief Minister of Andhra Pradesh is in the Andhra Pradesh Legislative Assembly and such statements are protected by Article 194 of the Constitution, consent cannot be given to raise the matter.

Sri G. CHANDRAKANT (Bidar).—The Hon'ble Chief Minister was kind enough to make a statement on the floor of the House regarding the Hubli incident. He said that he would hold a magisterial enquiry in the matter. He has also stated that he would give further factual information in the matter after he receives report from the Home Secretary. The Home Secretary seems to have come down from Hubli and I request the Chief Minister to give further information as it is engaging the attention of all persons there and the political parties are using this in their favour for the coming by-elections.

Mr. SPEAKER.—The Demand is scheduled to come up tomorrow and the member can raise it then. Probably the Hon'ble Chief Minister may come up with a statement tomorrow.

## (*ii*) *re :* Congress Exhibition at Bangalore City

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ತಮಗೆ ರೂಲ್ 59ರ ಪ್ರಕಾರ ಒಂದು ನೂಚನೆಯನ್ನು ಕಳಿಸಿದ್ದೆ ಈ ಸಭೆಯಲ್ಲಿ ಚರ್ಚೆ ನಡೆಸಬೇಕು ಎಂದು. ಬೆಂಗಳೂರು ನಗರದಲ್ಲಿ ನಡೆಯುತ್ತಿರುವ ಕಾಂಗ್ರೆಸ್ ವಸ್ತುಪ್ರದರ್ಶನದ ಬಗ್ಗೆ ಈ ಸಭೆಯಲ್ಲಿ ಚರ್ಚೆ ನಡೆದಿದೆ. ಅದರೂ...

ಶ್ರೀ ಕೆ. ಪುಟ್ಟಸ್ವಾಮಿ.—'ಪುನರಾಯಾನ್ಮಹಾ ಕಪಿಃ'

ಶ್ರೀ ವಾಟಾಳ್ ನಾಗರಾಜ್.—ಹೌದು, ಕಪಿಯನ್ನು ಕರೆಯುತ್ತಿದ್ದೇವೆ.

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ಉತ್ತರ ಕೊಟ್ಟಿರುವುದು ಮುಟ್ಟಿರಬಹುದು.

ಶ್ರೀ ವಾಟಾಳ್ ನಾಗರಾಜ್.—ಉತ್ತರ ಮುಟ್ಟಿಲ್ಲ. ನಾಳೆ ದಿವಸದಿಂದ ವಸ್ತುಪ್ರದರ್ಶನದ ಉದ್ಘಾಟನಾ ಸಮಾರಂಭ ನಡೆಯುವುದಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಪಾಯಿಂಟ್ ಆಫ್ ಆರ್ಡರ್, ಸ್ವಾಮಿ. ಸಂಸದೀಯ ವ್ಯವಹಾರಗಳ ಸಚಿವರು 'ಪುನರಾಯಾನ್ಮಹಾ ಕಪಿಃ ಎಂದು ಹೇಳಿದರು. ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಎದ್ದು ನಿಂತಿರುವ ಶ್ರೀಮಾನ್ ವಾಟಾಳ್ ನಾಗರಾಜ್ ಅವರನ್ನು ಉದ್ದೇಶಿಸಿ ಹೇಳಿದಂಥ ಮಾತೋ? ಹಾಗಿದ್ದರೆ ಅದು ತಪ್ಪಲ್ಲವೇ? ಅದನ್ನು ತಾವು ತೀರ್ಮಾನ ಮಾಡಬೇಕು.

Mr. SPEAKER.—I will look into the records.

ಶ್ರೀ ವಾಟಾಳ್ ನಾಗರಾಜ್.—ಮತ್ತೆ ಕಪಿ ಬಂದಿದೆ ಎಂದು ಅವರು ಹೇಳಿದ್ದಾರೆ.